ಶ್ರೀ ಎಂ. ರಾಮಪ್ಪ.—ನಮಗೆ ಇಲ್ಲಿ ಕೂರುವುದಕ್ಕೆ ಅಪಮಾನವಾಗುತ್ತಿದೆ ಆದ್ದರಿಂದ ನಾವು ಹೊರಗೆ ಹೋಗಿ ಬರುತ್ತೇವೆ.

(ಶ್ರೀ ರಾಮಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಗೋಪಾಲ ಮುಕುಂದ ಕಾನಡೆ.—ಕ್ರಾಂತಿ ರಂಗದವರು ಬರಬಾರದೆಂದು ಬೋರ್ಡ್ ಸಾಕಿ. ನಾವು ಬಂದ ತಕ್ಷಣ ಗಲಾಟೆ ಆಗುತ್ತದೆ ಅನ್ನುತ್ತೀರಿ.

ಅಧ್ಯಕ್ಷರು.—ಆ ರೀತಿ ಲಘುವಾಗಿ ಮಾತನಾಡಬಾರದು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ಎದ್ದ ತಕ್ಷಣ ಆ ರೀತಿಯಾಗಿ ಹೇಳುತ್ತೀರಿ. ಬೇರೆಯವರಿಗಾದರೆ ಸುಮ್ಮನೆ ಇರುತ್ತೀರಿ.

ಅಧ್ಯಕ್ಷರು.—ನಿಮ್ಮ ತಿಳುವಳಿಕೆ ಹಾಗೆ ಆಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಮಾಡತಕ್ಕ ನಡವಳಿಕೆ ಹಾಗೆ ಇದೆ.

ಅಧ್ಯಕ್ಷರು.—ವಿಷಯ ಇರತಕ್ಕದನ್ನು ಸಭೆಯ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಅದನ್ನು ತಿಳಿದುಕೊಳ್ಳದಿದ್ದರೆ ಸಭೆ ನಡೆಸುವುದು ಕಷ್ಟ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರಿಗೂ ಸ್ವಲ್ಪ ಹೇಳಿಬಿಡಿ.

ಅಧ್ಯಕ್ಷರು.—ಎಲ್ಲರಿಗೂ ಹೇಳುತ್ತೇನೆ. ಡಾ।। ತಿಮ್ಮೇಗೌಡರಿಗೂ ಹೇಳಿದ್ದೇನೆ. ಅವರ ವ್ಯಕ್ತವ್ಯ ಡಿಸ್ ಆಲೋ ಮಾಡಿದ್ದೇನೆ, ಶ್ರೀ ರಾಮದೇವ್ ಅವರದ್ದನ್ನೂ ಡಿಸ್‌ಆಲೋ ಮಾಡಿದ್ದೇನೆ. ಆದರೆ ನಿಮಗೆ ಮಾತ್ರ ಏಕೆ ಕೋಪ ಬರುತ್ತದೋ ಗೊತ್ತಿಲ್ಲ. ನಿಮಗೂ ಅವರಿಗೂ ಇರತಕ್ಕ ಬಾಂಧವ್ಯಕ್ಕೆ ನಾನು ಹೊಣೆಯೇ ?

(vi) ತೀರ್ಥಹಳ್ಳಿ ತಾಲ್ಲೂಕಿನ ಹರಿಕಥೆ ಗೋಪಾಲ ನಾಯಕರಿಗೆ ಪೋಲೀಸಿನವರು ತೊಂದರೆ ಕೊಟ್ಟಿರುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ತೀರ್ಥಹಳ್ಳಿ ತಾಲ್ಲೂಕಿನ ಹರಿಕಥೆ ಗೋಪಾಲ ನಾಯಕರು ಎಂದರೆ ಡಾ।। ಹಾ. ಮು. ನಾಯಕರ ಸಹೋದರ, ಮತ್ತು ಬಿ.ಎಸ್. ವಿಶ್ವನಾಥನ್ ಅವರ ಸಂಬಂಧಿ. ಅವರ ಮನೆಗೆ ಕಳೆದ ಒಂದನೇ ತಾರೀಖು ರಾತ್ರಿ ೧೦ ಗಂಟೆಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಗುಂಡಪ್ಪ ಮತ್ತು ಎರಡು ಜನ ಪೇದೆಗಳು ಹೋಗಿ ಲೂಟಿ ಮಾಡಿ, ಬೂಟು ಕಾಲಿನಿಂದ ಒದ್ದು, ದೇವರ ಕೋಣೆಯಲ್ಲೆಲ್ಲ ಹೋಗಿ ಒದ್ದು ಹೊತ್ತುಕೊಂಡು ಬರಬೇಕಾದರೆ ಅವರ ಹೆಂಡತಿಗೆ ಪ್ರಜ್ಞೆ ಹೋಗಿದೆ ಅಣ್ಣನಿಗೆ ಪ್ರಜ್ಞೆ ಹೋಗಿದೆ, ಚಿಕ್ಕ ಮಗು ಕಿರುಚಿಕೊಂಡಿದೆ ಮತ್ತು ಅವರ ಪ್ರಜ್ಞೆ ಹೋಗಿದೆ. ಅವರನ್ನು ಅಲ್ಲಿಂದ ಬಿಡದಿ ಪೋಲೀಸ್ ಠಾಣೆಗೆ ಕರೆದು ತಂದು ಹಿಂಸೆ ಕೊಟ್ಟಿದ್ದಾರೆ. ಮೇಲಾಗಿ ತೀರ್ಥಹಳ್ಳಿಯ ಪ್ರಮುಖ ಪಾಜಿ ಶಾಸಕರು ಹಾಗೂ ಪುರಸಭೆಯ ಅಧ್ಯಕ್ಷರಾಗಿರುವ ರವೀಂದ್ರ ಅವರು ಈ ಬಗ್ಗೆ ಸರ್ಕಾರಕ್ಕೆ ಒಂದು ಕರೆ ಕೊಟ್ಟಿದ್ದಾರೆ. ಈ ಒಂದು ಕೇಸನ್ನು ೨-೩ ದಿನದೊಳಗೆ ಸರ್ಕಾರ ಇತ್ಯರ್ಥ ಮಾಡದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ಕೇಳಿದ್ದಾರೆ. ಇವತ್ತಿನ ದಿವಸ ಪೋಲೀಸರ ದೌರ್ಜನ್ಯ ಜಾಸ್ತಿಯಾಗಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅವರು ಏನು ವಿವರಣೆ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಅಲ್ಲಿಂದ ವರದಿ ತರಿಸಿ ವಿಷಯ ಏನಾಗಿದೆ ಎಂಬುದನ್ನು ತಿಳಿದುಕೊಂಡು ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಅದು ನನ್ನ ಕ್ಷೇತ್ರವಾದರೂ ನನಗೇ ವಿಷಯ ಗೊತ್ತಿರಲಿಲ್ಲ. ದಯಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ವೈಯಕ್ತಿಕ ಸಮಸ್ಯೆಗಳನ್ನೆಲ್ಲ ಸಭೆಯ ಮುಂದೆ ತಂದರೆ ಸಭೆಯಲ್ಲಿ ಗಹನವಾದ ವಿಚಾರಗಳನ್ನು ಚರ್ಚಿಸುವುದಕ್ಕೆ ಸಮಯ ಸಿಗುವುದಿಲ್ಲವೆಂದು ತಮ್ಮ ಪಾದಪದ್ಮವನ್ನು ಪುಷ್ಟೀಕರಿಸಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಅಧ್ಯಕ್ಷರ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಸ್. ಬಂಗಾರಪ್ಪ.—(ಸದಸ್ಯರು ಹಾಜರಿರಲಿಲ್ಲ)

ಶ್ರೀ ಎಫ್. ಎ. ಕೊಪ್ಪದ್.—ನಮ್ಮಲ್ಲಿ ನೀರಿನ ತಾಪತ್ರಯ ಬಹಳ ಇದೆ. ೪–೫ ಹಳ್ಳಿಗಳಿಗೆ ನೀರಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ತಾಲ್ಲೂಕು ಕಚೇರಿಗಳಲ್ಲಿ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ಆಂದಾಗ ಇದಕ್ಕೆ ಹಣ ಕೊಡುವವರು ಯಾರು ? ಇವತ್ತು ಆಲ್ಲಿ ೪–೫ ಮೈಲಿ ದೂರದಿಂದ ನೀರು ಹೊತ್ತು ತರತಕ್ಕ ಪರಿಸ್ಥಿತಿ ಇದೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಬರಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತು ಅವರ ಬೇಡಿಕೆ ಮೇಲೆ ಚರ್ಚೆ ಇದೆ. ಆಗ ಅವರೇ ಇರುತ್ತಾರೆ, ಆಗ ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಅಧ್ಯಕ್ಷರು.—ಆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಆಗ ಹೇಳಿ.

(vii) ಗುಳೇದಗುಡ್ಡಕ್ಕೆ ನವಿಲು ತೀರ್ಥದಿಂದ ನೀರು ಪೂರೈಕೆ ಮಾಡುವ ಬಗ್ಗೆ

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಿಯಮಾವಳಿ ೩೫ರ ಪ್ರಕಾರ.....

ಅಧ್ಯಕ್ಷರು.—ಇವತ್ತು ಅದರ ಮೇಲೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ಮತ್ತೆ ನಿಯಮ ೩೫ರಲ್ಲಿ ಎತ್ತುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಎರಡು ದಿನದಿಂದ ವಿಷಯ ಸಭೆಯ ಮುಂದೆ ಬರಲಿಲ್ಲ. ನಮ್ಮಲ್ಲಿ ನೀರಿನ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಅದಕ್ಕೋಸ್ಕರ ರೂಲ್ ೩೫ರ ಪ್ರಕಾರ ಕಳುಹಿಸಿದ್ದೇನೆ.

ಅಧ್ಯಕ್ಷರು.—ಇವತ್ತು ಅದೇ ಬೇಡಿಕೆಮೇಲೆ ಚರ್ಚೆ ಇದೆ. ಆಗ ವಿಷಯವನ್ನು ಪ್ರಸ್ತಾಪ ಮಾಡಿ ಮಂತ್ರಿಗಳಿಗೆ ವಿಷಯ ತಿಳಿಸಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನೀರಿಲ್ಲ ಎಂದು ಪರದಾಡುವಾಗ ಏನು ಮಾಡಲಿಕ್ಕೆ ಬರುತ್ತದೆ. ಆಲ್ಲಿ ೬೦ ಸಾವಿರ ಜನಸಂಖ್ಯೆ ಇದೆ.

ಅಧ್ಯಕ್ಷರು.—ರೂಲ್ ೩೫ರಲ್ಲಿ ವಿಷಯ ಎತ್ತಿದರೆ ನೀರು ಬರುತ್ತದೆಯೆ ?

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಿನ್ನೆ ರೂಲ್ ೭೨ರ ಪ್ರಕಾರ ಕಳುಹಿಸಿದ್ದೆ, ಆಗಲೂ ಚರ್ಚೆಗೆ ಬರಲಿಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಸಂಬಂಧಪಟ್ಟ ಮಂತ್ರಿಗಳನ್ನು ನೋಡಿ ರೆ ಅವರ ಕೆಲಸ ಆಗುತ್ತದೆ.

ಅಧ್ಯಕ್ಷರು.—ರೂಲ್ ೭೨ ರಲ್ಲಿ ಕೊಟ್ಟರೆ ಹಾಕಿದ್ದೇವೆ. ಮಂತ್ರಿಗಳು ಉತ್ತರಿಸುತ್ತಾರೆ ಬಿಡಿ.

ಶ್ರೀ ವಿ. ಧನಂಜಯ ಕುಮಾರ್.—ಇದು ಗ್ರಾಮಾಭಿವೃದ್ಧಿ ಸಚಿವರಿಗೆ ಸಂಬಂಧಿಸಿದ್ದಲ್ಲ ನಗರಾಭಿವೃದ್ಧಿ ಸಚಿವರಿಗೆ ಸಂಬಂಧಿಸಿದ್ದು.

ಅಧ್ಯಕ್ಷರು.—ನಿಮ್ಮ ನೋಟೀಸ್ ಓದಿಬಿಡಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಓದುತ್ತೇನೆ. ಗುಳೇದಗುಡ್ಡಕ್ಕೆ ನಳದ ನೀರು ಪೂರೈಕೆಯು ಆಸಂಗಿ ಗ್ರಾಮದ ಹತ್ತಿರ ಹರಿದು ಬರುತ್ತಿರುವ ಮಲಪ್ರಭಾ ನದಿಯಿಂದ ಇದ್ದು ಈಗ ನದಿಯಲ್ಲಿ ನೀರು ಕಡಿಮೆಯಾಗಿ ೩೦ ಸಾವಿರ ಜನ ವಸತಿಯಾದ ಗುಳೇದಗುಡ್ಡ ನಗರಕ್ಕೆ ನೀರಿನ ಪೂರೈಕೆಯು ಕಡಿಮೆ ಆಗುತ್ತದೆ. ಆದ್ದರಿಂದ ನವಿಲು ತೀರ್ಥದಲ್ಲಿ ಶೇಖರಿಸಲ್ಪಟ್ಟ ನೀರನ್ನು ಕೂಡಲೇ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಮಲಪ್ರಭಾ ನದಿಗೆ ಹೆಚ್ಚಿಗೆ ನೀರು ಬಿಡಬೇಕೆಂದು ಗುಳೇದಗುಡ್ಡ ಜನತೆಗೆ ಆಗುತ್ತಿರುವ ಈ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನಾವು ಸಾರ್ವಜನಿಕ ಮಹತ್ವದ ವಿಷಯವಾಗಿ ಕ್ರಿಯಾಲೋಪವಲ್ಲದ ಈ ವಿಚಾರವಾಗಿ ನಾವು ಸರ್ಕಾರದ ಗಮನ ಸೆಳೆಯುತ್ತೇವೆ.